







ಕೊಲ್ಹಾಪುರದ ಘೋರ್ಪಡೆ ಮನೆತನದ ರಾಜರ ಆಳ್ವಿಕೆಯಲ್ಲಿತ್ತು. ಈಗಲೂ ಘೋರ್ಪಡೆ ರಾಜರ ದೊಡ್ಡ ವಾಡೆ ಬೆಟ್ಟದ ಕೆಳಗೆ ಇದ್ದು ಅವರ ವಂಶಸ್ಥರು ಅಲ್ಲಿ ವಾಸಿಸುತ್ತಿರುವುರಾದರೂ ವಾಡೆ ಸುಸ್ಥಿತಿಯಲ್ಲಿಲ್ಲ. ವಾಡೆಯ ಒಂದು ಕಡೆಗೆ ಸೇವಕರ ವಾಸದ ಮನೆಗಳು, ಕುದುರೆ ಲಾಯ, ಧಾನ್ಯಗಳ ಸಂಗ್ರಹಕ್ಕೆ ಹಗೇವು ಇವೆ. ಇವೆಲ್ಲವೂ ಜೀರ್ಣಾವಸ್ಥೆಯಲ್ಲಿವೆ.

ಸರಕಾರ ಗಜೇಂದ್ರಗಡ ಕೋಟೆಯನ್ನು ಒಂದು ಪ್ರೇಕ್ಷಣೀಯ ಸ್ಥಳವನ್ನಾಗಿ ರೂಪಿಸಬಹುದು. ಗಜೇಂದ್ರಗಡ ಪಟ್ಟಣವು ಬಾದಾಮಿ ಚಾಲುಕ್ಯರ ಐತಿಹಾಸಿಕ ಪ್ರೇಕ್ಷಣೀಯ ಸ್ಥಳಗಳಾದ ಬಾದಾಮಿ, ಬನಶಂಕರಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಸೂಡಿ, ಮಹಾದೇವ ದೇವಸ್ಥಾನ ಇಟಗಿ ಮುಂತಾದವುಗಳಿಂದ ಸುತ್ತುವರಿಯಲ್ಪಟ್ಟಿದೆ.

ತಲುಪಲು ಮಾರ್ಗ: ಗಜೇಂದ್ರಗಡದಿಂದ ಬೆಂಗಳೂರು– 430 ಕಿಮೀ, ಹುಬ್ಬಳ್ಳಿಯಿಂದ 120 ಕಿಮೀ.